ಅ) ಶಿವಮೊಗ್ಗ ನರಗದಲ್ಲಿರುವ ಕೇಂದ್ರ ಕಾರಾಗೃಹ ಸುತ್ತಲೂ ರಕ್ಷಣಾ ಗೋಡೆ ನಿರ್ಮಿಸುವ ಯೋಜನೆ ಸರ್ಕಾರದ ಪ್ರಸ್ತಾವನೆಯಲ್ಲಿದೆಯೆ? ಈ ಯೋಜನೆಯ ಉದ್ದೇಶಿತ ಮೊತ್ತವೆಷ್ಟು? ಯಾವಾಗ ಪ್ರಾರಂಭಿಸಲಾಗುವುದು;

ಆ) ಶಿವಮೊಗ್ಗ ಕಾರಾಗೃಹದಲ್ಲಿ ಹೊಡೆದಾಟ, ಕೊಲೆ ಪ್ರಕರಣಗಳು ನಡೆದಿರುವುದು ಸರ್ಕಾರಕ್ಕೆ ಮಾಹಿತಿ ಬಂದಿದೆಯೇ; ಇಂತಹ ಪ್ರಕರಣಗಳಲ್ಲಿ ಅಧಿಕಾರಿಗಳ ನಿರ್ಲಕ್ಷತನ ಹಾಗೂ ಕರ್ತವ್ಯ ಲೋಪವಾಗಿರುವ ಬಗ್ಗೆ ಸರ್ಕಾರದ ವತಿಯಿಂದ ಏನು ಕ್ರಮ ಜರುಗಿಸಲಾಗಿದೆ; ಕಾರಾಗೃಹದಲ್ಲಿ ವಿಚಾರಣಾಧೀನ ಖೈದಿಗೆ ಅಥವಾ ಶಿಕ್ಷೆಗೆ ಒಳಪಟ್ಟ ಖೈದಿಗೆ ಸಹಜ ಅಥವಾ ಅಸಹಜ ಸಾವು ಸಂಭವಿಸಿದರೆ, ಪರಿಹಾರ ನೀಡಲಾಗುವುದೇ?

ಶ್ರೀ ರಾಜ ಅಮರೇಶ್ವರ್ ನಾಯಕ (ಬಂದೀಖಾನೆ ಸಚಿವರು) :

ಅ) ಇದೆ. ಈ ಯೋಜನೆಗೆ ರೂ. 10.00 ಲಕ್ಷಗಳನ್ನು ನಿಗಧಿಗೊಳಿಸಿದೆ. ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ಲೋಕೋಪಯೋಗಿ ಇಲಾಖೆಯಿಂದ ಟೆಂಡರ್ ಕರೆಯಲಾಗಿದ್ದು ಆದಷ್ಟು ಶೀಘ್ರ ಪ್ರಾರಂಭಿಸಲಾಗುವುದು.

ಆ) ಬಂದಿದೆ. ಈ ಪ್ರಕರಣದಲ್ಲಿ ಯಾವುದೇ ಅಧಿಕಾರಿ/ಸಿಬ್ಬಂದಿಗಳು ಶಾಮೀಲಾಗಿರುವುದಿಲ್ಲ. ಕಾರಾಗೃಹಗಳಲ್ಲಿನ ಬಂದಿಗಳಿಗೆ ಸಹಜ ಅಥವಾ ಅಸಹಜ ಸಾವು ಸಂಭವಿಸಿದರೆ ಪರಿಹಾರ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

**ಕೊರಟಗೆರೆ ತಾಲ್ಲೂಕಿನಲ್ಲಿ ಆರಕ್ಷಕ ಠಾಣೆ ಮಂಜೂರಾತಿ**

2569(3351) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ಕೋಳಾಲದಲ್ಲಿ ಹೊಸದಾಗಿ ಆರಕ್ಷಕ ಉಪ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾವನೆಗೆ ಇದೂವರೆವಿಗೂ ಮಂಜೂರಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ಈ ಆರಕ್ಷಕ ಉಪ ಠಾಣೆ ಮಂಜೂರಾತಿಗೆ ವಿಳಂಬ ಮಾಡಿರುವ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು;

ಇ) ಇದೇ ಸಾಲಿನಲ್ಲಿ ಆರಕ್ಷಕ ಉಪ ಠಾಣೆ ಪ್ರಾರಂಭ ಮಾಡಿ ಈ ಭಾಗದ ಜನತೆಗೆ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಕೊರಟಗೆರೆ ತಾಲ್ಲೂಕು ಕೋಳಾಲದಲ್ಲಿ ಒಂದು ಆರಕ್ಷಕ ಪೊಲೀಸ್ ಠಾಣೆಯ ಸೃಜನೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಜನತೆಗೆ ಅನುಕೂಲವಾಗುವ ರೀತಿಯಲ್ಲಿ ಪರಿಶೀಲಿಸಲಾಗುವುದು.

**ಕಾರ್ಕಳ ನಗರಕ್ಕೆ ನೀರು ಸರಬರಾಜು**

2570(3209) ಶ್ರೀ ಗೋಪಾಲ ಬಂಡಾರಿ (ಕಾರ್ಕಳ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?